# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:೦೫.೧೨.೨೦೨೦ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ವಾರ್ಡ್ ನಂ.೧೬ ಜಾಲಹಳ್ಳಿಯಲ್ಲಿ ಶ್ರೀ ಹೆಚ್. ಎಸ್. ದಯಾನಂದ, (ಸ.ಕಾ.ನಿ.ಅ,ಕೆಂಗೇರಿ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದವರು:-**

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| ೧ | ಶ್ರೀ ಹೆಚ್. ಎಸ್. ದಯಾನಂದ | ಸ.ಕಾ.ನಿ.ಅ., ವಾರ್ಡ್ ನೋಡಲ್ ಅಧಿಕಾರಿಗಳು |
| ೨ | ಶ್ರೀ ಗಿರೀಶ ಹೆಚ್. ಎನ್. | ಸಹಾಯಕ ಅಭಿಯಂತರರು, ಸದಸ್ಯ ಕಾರ್ಯದರ್ಶಿ |
| ೩ | ಡಾ|| ಲೀಲಾವತಿ | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. |
| ೪ | ಶ್ರೀ ರಘುನಾಥ್ ಟಿ. | ಹಿರಿಯ ಆರೋಗ್ಯ ಪರಿವೀಕ್ಷಕರು |
| ೫ | ಶ್ರೀ ರವಿಕುಮಾರ್ ಕೆ. ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| ೬ | ಶ್ರೀ ವೇಣು, | ಕಂದಾಯ ವಸೂಲಿಗಾರರು |
| ೭ | ಶ್ರೀ ಪ್ರದೀಪ್ ಕುಮಾರ್ | ಕಿ.ಅ. ಬೆಸ್ಕಾಂ |
| ೮ | ಶ್ರೀ ರಮೇಶ್ | ಎ.ಎಸ್.ಐ. ಜಾಲಹಳ್ಳಿ ಪೋಲಿಸ್ ಠಾಣೆ |
| ೯ | ಶ್ರೀ ಮುನಿರಾಜು ವೈ. | ವಾರ್ಡ್ ಮಾರ್ಷಲ್ |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**೧) ಬ್ಲ್ಯಾಕ್ ಸ್ಪಾಟ್ (ಘನತ್ಯಾಜ್ಯ) ಗಳ ನಿರ್ವಹಣೆ ಕುರಿತು:-**

ಘನತ್ಯಾಜ್ಯ ಸಂಗ್ರಹಿಸುವಂತಹ ವಾಹನಗಳಿಗೆ ಧ್ವನಿವರ್ಧಕ ಹಾಗೂ ಜಿಪಿಎಸ್ ಅಳವಡಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಚರ್ಚಿಸಿದರು..

ಮಾನ್ಯ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಧ್ವನಿವರ್ಧಕ ಹಾಗೂ ಜಿಪಿಎಸ್ ಕಡ್ಡಾಯವಾಗಿ ಅಳವಡಿಸುವಂತೆ ಸೂಚಿಸಿರುತ್ತಾರೆ. ಬ್ಲ್ಯಾಕ್ ಸ್ಪಾಟ್ ಸ್ಥಳಗಳಲ್ಲಿ ಔಷಧಿ ಸಿಂಪಡಣೆ ಮಾಡಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿರುತ್ತದೆ. ಘನತ್ಯಾಜ್ಯ ಇಲಾಖೆಯ ನಿರ್ವಹಣೆ ಅಧಿಕಾರಿಗಳು ಮತ್ತು ಮೇಲ್ವಿಚಾರಕರು ಬ್ಲ್ಯಾಕ್‌ಸ್ಪಾಟ್ ಸ್ಥಳಗಳಲ್ಲಿ ರಾತ್ರಿ ಹೊತ್ತು ಕಸ ಸುರಿಯುವವರಿಗೆ ದಂಡ ವಿಧಿಸಲು ಸಭೆಯಲ್ಲಿ ಸೂಚಿಸಿರುತ್ತಾರೆ. ಹಾಗೂ ವಾರ್ಡ್ ಪರಿಮಿತಿಯಲ್ಲಿ ಸಂಗ್ರಹವಾಗುವಂತಹ ತ್ಯಾಜ್ಯಗಳನ್ನು ವಿಂಗಡಿಸಿ (ಒಣ ಕಸ ಮತ್ತು ಹಸಿ ಕಸ) ವಿಲೇವಾರಿ ಮಾಡಲು ಸೂಚಿಸಿರುತ್ತಾರೆ.

**೨) ಬಿಡಬ್ಲ್ಯೂಎಸ್‌ಎಸ್‌ಬಿ:-**

ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಕೈಗೊಳ್ಳಲಾಗಿರುವ ಸ್ಯಾನಿಟರಿ ಕೆಲಸಗಳಲ್ಲಿ, ತ್ಯಾಜ್ಯಗಳನ್ನು ಹಾಗೆ ಅಲ್ಲಿಯೇ ಬಿಟ್ಟಿದ್ದು, ತೆರವುಗೊಳಿಸಲು ಸಂಬಂಧಪಟ್ಟ ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

ವಾರ್ಡ್ ಪರಿಮಿತಿಯಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ, ಸಮರ್ಪಕವಾಗಿ ಸರಬರಾಜು ಮಾಡುವಂತೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**೩) ಬೆಸ್ಕಾಂನವರು ಕಟಾವು ಮಾಡಿದ ಮರಗಳ ರೆಂಬೆಗಳನ್ನು ತೆರವುಗೊಳಿಸುವ ಬಗ್ಗೆ:-**

ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರಸ್ತಾಪಿತ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಕಿರಿಯ ಅಭಿಯಂತರರಿಗೆ ಕೂಡಲೇ ಕ್ರಮವಹಿಸಲು ಸೂಚಿಸಿರುತ್ತಾರೆ

**೪) ಕೋವಿಡ್-೧೯ ಸಾಂಕ್ರಾಮಿಕ ರೋಗದ ಬಗ್ಗೆ:-**

- ಜಾಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಕೋವಿಡ್-೧೯ ಸಾಂಕ್ರಮಿ ರೋಗ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾಗಳೊಂದಿಗೆ ಸಭೆಯಲ್ಲಿ ಚರ್ಚಿಸಿ, ಸಲಹೆ ಸೂಚನೆಗಳನ್ನು ನೀಡಿರುತ್ತಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಔಷಧಿ ಸಂಗ್ರಹಿಸುವ ಸ್ಟೋರೇಜ್‌ಗಳ ಕೊರತೆಯಿದ್ದು, ಔಷದಿಗಳನ್ನು ಸಂಗ್ರಹಿಸಿಡಲು ತೊಂದರೆಯಾಗುತ್ತಿದೆ ಎಂದು ಆರೋಗ್ಯಾಧಿಕಾರಿಗಳು ಸಭೆಯಲ್ಲಿ ಚರ್ಚಿಸಿದರು.

ಸ್ವಾಬ್ ಕಲೆಕ್ಟರ್‌ಗಳಿಗೆ ಬೆಳಗಿನ ಉಪಾಹಾರದ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಆರೋಗ್ಯಾಧಿಕಾರಿಗಳು, ಹಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಕೋರಿರುತ್ತಾರೆ.

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನಜಾಗೃತಿ ಮೂಡಿಸಲು ಧ್ವನಿವರ್ಧಕವಿರುವ ಆಟೋಗಳಲ್ಲಿ ಸಾಯಂಕಾಲ ೫ ರಿಂದ ೭ ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಘನತ್ಯಾಜ್ಯದ ಗುತ್ತಿಗೆದಾರರಿಗೆ ಸೂಚಿಸಿದರು. ಜೊತೆಗೆ ಬೀದಿ ಬೀದಿಗಳಲ್ಲಿ ತಳ್ಳುವ ಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸೂಚಿಸಿದರು.

ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಟಮಿನ್ ಸಿ ಹಾಗೂ ವಿಟಮಿನ್ ಡಿ ೩ ಔಷಧಿಯ ಕೊರತೆಯಿದ್ದು, ಸುಮಾರು ತಿಂಗಳಾದರೂ ಔಷಧಿಯನ್ನು ಪೂರೈಸಲು ಆರೋಗ್ಯ ಇಲಾಖೆ ಗಮನ ಕೊಡದೇ ಇರುವುದು ಕಂಡುಬಂದಿದ್ದು, ಕ್ರಮವಹಿಸಲು ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರಸ್ತಾಪಿತ ವಿಷಯದ ಬಗ್ಗೆ ಕೋವಿಡ್ ನಿರ್ವಹಣೆಗಾಗಿ ಬಿಬಿಎಂಪಿಯ ಅನುದಾನದಡಿಯಲ್ಲಿ ಅನುವು ಮಾಡಿಕೊಡಲು ಮತ್ತೊಮ್ಮೆ ಸೂಚಿಸಿರುತ್ತಾರೆ.

**೫) ಬೀದಿ ನಾಯಿಗಳ ಬಗ್ಗೆ:-**

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆಯೇ, ವಾರ್ಡ್ ಪರಿಮಿತಿಯಲ್ಲಿ ಬೀದಿ ನಾಯಿಗಳ ಕಾಟ ಅತಿಯಾಗಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇವುಗಳ ನಿಯಂತ್ರಣಕ್ಕಾಗಿ, ಬಿಬಿಎಂಪಿ ಪಶುಪಾಲನಾ ವಿಭಾಗರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

**೬) ಕಾಮಗಾರಿ ಇಲಾಖೆ:-**

➢ **'ಸಹಾಯ ೨.೦' ಕೋಶದಲ್ಲಿ ದಾಖಲಾಗುವ ಸಾರ್ವಜನಿಕರ ದೂರುಗಳನ್ನು ವಿಲೇ ಮಾಡುವ ಬಗ್ಗೆ ಚರ್ಚಿಸಲಾಗಿದ್ದು**, ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ದೂರುಗಳು ಬಾಕಿ ಇದ್ದು, ಇದರ ಬಗ್ಗೆ ವಾರ್ಡ್ ಸಹಾಯಕ ಅಭಿಯಂತರರು ಮಾತನಾಡಿ, ದೂರುಗಳನ್ನು ಶೀಘ್ರವಾಗಿ ಪರಿಹರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

**೭) ಬೀದಿ ದೀಪಗಳಿಗೆ ಹೊಸ ಲೈನ್‌ಗಳನ್ನು ಅಳವಡಿಸುವ ಬಗ್ಗೆ ಹಾಗೂ ಸಿ.ಸಿ. ಟಿವಿ ನಿರ್ವಹಣೆ ಕುರಿತು:-**

ಹೊಸದಾಗಿ ಬೀದಿ ದೀಪಗಳಿಗೆ ಲೈನ್ ಅನ್ನು ಅಳವಡಿಸಲು ಸಂಬಂಧಪಟ್ಟ ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ, ರಾ. ರಾ. ನಗರ ವಲಯ, ಬಿಬಿಎಂಪಿ ರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

ಬೆಸ್ಕಾಂನವರು ಕಟಾವು ಮಾಡಿರುವ ಮರಗಳ ರೆಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬೆಸ್ಕಾಂ) ರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

**೮) ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ:**

ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆಯೇ, ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಕೋವಿಡ್ ಟೆಸ್ಟ್ ಮಾಡಿಸಲು ಸೂಚಿಸಿರುತ್ತಾರೆ. ಮಾನ್ಯ ಅಧ್ಯಕ್ಷರು ಮಾತನಾಡಿ, ಆಯುಕ್ತರು, ಬಿಬಿಎಂಪಿರವರ ಆದೇಶದನ್ವಯ ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಕೋವಿಡ್ ಟೆಸ್ಟ್ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪೌರ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ, ಪೌರ ಕಾರ್ಮಿಕ ಸಿಬ್ಬಂದಿಗಳಿಗೆ ಮಾಸ್ಕ್, ಗ್ಲೌಸ್ ಹಾಗು ಸ್ಯಾನಿಟೈಸರ್‌ಗಳನ್ನು ವಿತರಿಸಲು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುತ್ತಾರೆ.

ಪೌರ ಕಾರ್ಮಿಕರು ಮೆಕಾನಿಕಲ್ ಸ್ವೀಪಿಂಗ್ ಮೆಷಿನ್‌ಗಳನ್ನು ಒದಗಿಸಲು ಕೋರಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್ ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗಿರೀಶ ಹೆಚ್. ಎನ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:೧೬

(ಹೆಚ್. ಎಸ್. ದಯಾನಂದ)
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:೧೬